ದಿನಪತ್ರಿಕೆ
1 ಕಾಸು
ತಿಂಗಳಿಗೆ
ವಾರಪತ್ರಿಕೆ ಸೇರಿ
4 ಆಣೆ

Regd. No. M 1299

SATYAVADI

ಸತ್ಯವಾದಿ

ಸಂಪುಟ 26] ಗುರುವಾರ 21—1—1943 [ಸಂಚಿಕೆ 85

ಅಕ್ಕರ

ಸಾವಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ಸತ್ಯವಾದಿ ಆಫೀಸ್ ಮೈಸೂರು.

ಎರಡನೇ ರಣರಂಗ ಪ್ರಾರಂಭವೇ ?

ಕಲ್ಕತ್ತಾ ಮೇಲೆ ಮತ್ತೆ ಧಾಳಿ

ಮೊನ್ನೆ ರಾತ್ರಿ ಸ್ವಲ್ಪಸಂಖ್ಯೆಯ ಶತ್ರು ವಿಮಾನಗಳು ಕಲ್ಕತ್ತಾ ಮೇಲೆ ಧಾಳಿ ನಡೆಸಿ, ಕೆಲವು ಬಾಂಬುಗಳನ್ನು ಹಾಕಿದವು. ಆರ್. ಎ. ಎಫ್. ಫೈಟರುಗಳ ಕಾರ್ಯ ತತ್ಪರತೆಯಿಂದ ಶತ್ರು ವಿಮಾನಗಳು ಜಖಂ ಪಡಿಸಲ್ಪಟ್ಟು ಓಡಿಸಲ್ಪಟ್ಟವು. ಸಾವು ನೋವುಗಳ ವಂದಿಯೇನೂ ಆಗಿಲ್ಲವೆಂದು ಹೇಳಲಾಗಿದೆ.

ಚಿಲ್ಲರೆ ಸಂಗ್ರಹಣ ಮಹಾಪರಾಧ

ಹಿಂದೂಸ್ಥಾನ ಸರಕಾರದವರು ಕಪ್ಪು ಗೆಜಿಟ್ಟಿನಲ್ಲಿ 'ಚಿಲ್ಲರೆ ಹಣ ಸಂಗ್ರಹ ಮಾಡುವುದು ಮಹಾಪರಾಧವೆಂದೂ, ಚಿಲ್ಲರೆ ಸಂಗ್ರಹಿಸಿದವರನ್ನು ಗೊತ್ತುಮಾಡಿಕೊಟ್ಟವರಿಗೆ ಯೋಗ್ಯ ಬಹುಮಾನ ಕೊಡಲಾಗುವುದೆಂದೂ ತಿಳಿಸಲ್ಪಟ್ಟಿರುವುದಲ್ಲಿ ಹೇಳಲಾಗಿದೆ.

ಸಿಲೋನಿಗೆ ಭಾರತದ ಕೂಲಿಗಳು

ಇಂಡಿಯಾದಿಂದ ಸಿಲೋನಿನ ರಬ್ಬರ್ ತೋಟಗಳಿಗೆ 30 ಸಾವಿರ ಕೂಲಿಗಾರರನ್ನು ಒದಗಿಸುವ ವಿಷಯದಲ್ಲಿ ಸಿಲೋನಿನವರಿಗಿರುವ ಹಕ್ಕು ಬಾಧ್ಯತೆಗಳನ್ನು ಇವರಿಗೂ ಸರಿಸಮವಾಗಿ ಕೊಡುವವರೆಗೆ ಇಂಡಿಯಾ ಸರಕಾರದವರು ಕಳುಹಿಸಲು ಒಪ್ಪಬಾರದೆಂದು ಇಂಡಿಯನ್ ಕಾಮರ್ಸ್ ಸಂಸ್ಥೆಯು ಅಭಿಪ್ರಾಯ.

ಐನೆ ರಣರಂಗ

ಅಮೇರಿಕಾ-ಮತ್ತು ಬ್ರಿಟಿಷರು ? ನೇ ರಣರಂಗವನ್ನು ಯೂರೋಪಿನಲ್ಲಿ ಬರುವ ವಸಂತ ಋತುವಿನಲ್ಲಿ ಪ್ರಾರಂಭಿಸುವರೆಂದು ಅಮೇರಿಕಾದ ಪ್ರಸಿದ್ಧ ಪತ್ರಿಕಾ ಲೇಖಕರಾದ ಪಿಯರ್ಸನ್ ಭವಿಷ್ಯವಾಣಿ.

ಶ್ರೀ ರಾಮನಾರ್ಥರವರಿಗೆ ಭರತಪುರದ ದಿವಾನ ಪದವಿ

ಮೈಸೂರು ಸಂಸ್ಥಾನದ ನ್ಯಾಯಾಂಗ ಸಚಿವರಾದ ರಾಜಮಂತ್ರಪ್ರವೀಣ ಶ್ರೀ ಎ. ವಿ. ರಾಮನಾರ್ಥರವರು ಭರತಪುರದ ದಿವಾನರಾಗಿ ನಿಯಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಿಸುತ್ತೇವೆ.

LATEST NEWS

ಬ್ರಿಟಿಷ್ 8 ನೇ ಸೈನ್ಯವು ಹಾಮ್ ಮತ್ತು ಬಾಸ್ಟಾಕ್ ಹತ್ತಿರ ಬಂದಿರುವುದಾಗಿ ಕೈರೋವಿನಿಂದ ಒಂದಿರುವ ವಾರ್ತೆ.

ಕ್ಯಾಸೆಲ್ಲಾ ಬೆನಿಟೋ ವಿಮಾನ ನಿಲ್ದಾಣದ, ಮತ್ತು ಟ್ರಿಪೊಲಿಸ್ ಮತ್ತು ಸೌಸೇರೆವುಗಳ ಮೇಲೂ ಆರ್. ಎ. ಎಫ್. ನವರು ಭಾರಿ ದಾಳಿ ನಡೆಸಿರುವರು.

ಬರುವ ಶನಿವಾರ ಮದರಾಸಿನಲ್ಲಿ ನಡೆಯುವ ಕುದುರೆ ಜೂಜಿನ ಜೊಬ್ಬಳ್ಳಿ ಕಪ್ ಈವಿಂಟಿಗೆ 24 ಕುದುರೆಗಳು ಹ್ಯಾಂಡಿಕ್ಯಾಪ್ ಮಾಡಲ್ಪಟ್ಟಿವೆ.

ಯುದ್ಧವಾರ್ತೆ

ಖಾರ್ಕೋವಿಗೆ 70 ಮೈಲಿ ಪೂರ್ವಕ್ಕೆ ವಾಲೂಕಿಯನ್ನು ರಷ್ಯದ ಕೆಂಪು ಸೈನ್ಯವು ವಶಪಡಿಸಿಕೊಂಡು ಬಂದೇ ಪೀತಿ ಮುನ್ನುಗ್ಗುತ್ತಿದೆಯೆಂದು ಅರಿಯಿಲಾಗಿದೆ.

ನೂತನ ವರ್ಷಾರಂಭದ ದಿನ ರಷ್ಯನರು ವಶಪಡಿಸಿಕೊಂಡ ವೆಲಿಲೂಲೂಕಿಯನ್ನು ಪುನಃ ಕಿತ್ತುಕೊಳ್ಳಲು ಜರ್ಮನರು ವಿಶ್ವ ಪ್ರಯತ್ನ ನಡೆಸಲು ಹಟತೊಟ್ಟಿರುವರೆಂದು ತಿಳಿಯಬಂದಿದೆ.

ಸ್ಟಾಲಿನ್‌ಗ್ರಾಡಿನಲ್ಲಿ ಜರ್ಮನ್ ಸೈನ್ಯಗಳಿಗೆ ನೇತೃವಾಗಿದ್ದ ಜನರಲ್ ಪದಲಸ್ ಎಂಬುವನು ಆ ಪ್ರದೇಶವನ್ನು ಬಿಟ್ಟು ಹೋಗಿರಬಹುದೆಂದೂ ಅಥವಾ ಅಂಥಪರಿಸ್ಥಿತಿಯಲ್ಲಿರುವನೆಂದೂ ತಿಳಿಯಬಂದಿದೆ.

ನಾಜಿಗಳು ಟ್ಯುನಿಸಿಯದಲ್ಲಿ ಆಕ್ರಮಣವನ್ನು ಆರಂಭಿಸಿದ್ದಾರೆ. ಪೌಂಟ್ ಡುಫಾಸಿನ ಒಳಿ ಕೆಲವು ಪ್ರದೇಶಗಳನ್ನು ಸಂಪಾದಿಸಿದ್ದಾರೆ.

ಬ್ರಿಟಿಷ್ ಎಂಟನೆ ದಳವು ಟ್ರಿಪೋಲಿಗೆ ಕೇವಲ 30 ಮೈಲಿಯಲ್ಲಿದೆ. ಹಿಂದಕ್ಕೆ ಸರಿಯುತ್ತಿರುವ ಶತ್ರುವಿನೊಡನೆ ಕದನ ನಡೆಸುತ್ತಾ ಮುಂದುವರಿಯುತ್ತಿದೆ.

ಬ್ರೆಸಲ್ ಅಜೆ 5 ಆಕ್ಸಿಸ್ ಹಡಗುಗಳು ಮುಳುಗಿಸಲ್ಪಟ್ಟವು.

ಕ್ಷಾಮದಿಂದ ಸೊಂದವರಿಗಾಗಿ

ಬಿಜಾಪುರದಲ್ಲಿ ವೀರಕ್ಷಾಮ ಪ್ರಯುಕ್ತ ಬೊಂಬಾಯಿ ವರ್ತಕರು ಐವತ್ತೈದು ಸಾವಿರ ರೂಪಾಯಿ ಚಂದಾಕೂಡಿಸಿರುವರು. ಎಂಟು ತಿಂಗಳಿಗೆ ಬೇಕಾವ ಒಂದು ಲಕ್ಷ ರೂಪಾಯಿಯನ್ನು ಕೂಡಲೇ ಕೂಡಿಸಲಿರುವರು.

ಬುದ್ಧಿ ಬಂತೇ !

ಮದರಾಸಿನ ಹೋಟಲಿನವರು ಕೆಲವರು ಚಿಲ್ಲರೆ ನಾಣ್ಯ ಶೇಖರಿಸಿಟ್ಟಿದ್ದರೆಂದು ದಸ್ತಗಿರಿ ಮಾಡಲ್ಪಟ್ಟು ಶಿಕ್ಷಿಸಲ್ಪಟ್ಟರಷ್ಟೆ. ನಿನ್ನೆ ಕೆಲವು ಹೋಟಲು ಮಾಲೀಕರು ತಮ್ಮಲ್ಲಿದ್ದ ಚಿಲ್ಲರೆಯನ್ನು ಇಂಪೀರಿಯಲ್ ಬಾಂಕಿಗೆ ಕಳುಹಿಸಿ ರೂಪಾಯಿಗಳನ್ನು ಪಡೆದರುತ್ತಾರೆ.

ದಾಳಿಗೆ ಪ್ರತಿದಾಳಿ

ಲಂಡನ್ ಮೇಲೆ ಜರ್ಮನರು ದಾಳಿ ಮಾಡುವದರಿಂದ, ತಾವೂ ಕೂಡ ರೋಂ ಪಟ್ಟಣದ ಮೇಲೆ ವಿಮಾನದಾಳಿಯನ್ನು ಏಕೆ ಮಾಡಕೂಡದೆಂದು ಮಿ॥ ಎಡ್ಡರವರು ಹೇಳುತ್ತಾರೆ. ರೋಂನಗರದ ಹತ್ತಿರದಲ್ಲೆ ಇಟಲಿಯನರ ಮದ್ದುಗುಂಡು ತಯಾರ್ಮಾಡುವ ಕಾರ್ಖಾನೆ ಇರುವದೆಂದು ಹೇಳುತ್ತಾರೆ.

ಲಂಡನ್ ಮೇಲೆ ದಾಳಿ

ಜರ್ಮನ್ ವಿಮಾನಗಳ ನಷ್ಟ

ಲಂಡನ್ ಮೇಲೆ 60 ಜರ್ಮನ್ ವಿಮಾನಗಳು ದಾಳಿ ಮಾಡಲು ಬರಲು, ಆರ್. ಎ. ಎಫ್. ವಿಮಾನಗಳು ಎದುರಿಸಿ, ಅವುಗಳಲ್ಲಿ 13 ನ್ನು ಸುಟ್ಟು ಕೆಡಪಿದವು. ಜರ್ಮನ್ ವಿಮಾನಗಳು ಓಡಿಹೋದವು. ಅವಲ್ಲಿ 6 ಮಾತ್ರ ಲಂಡನ್ ಭಾಗಗಳಲ್ಲಿ ಬಾಂಬುಗಳನ್ನು ಹಾಕಿ ಒಂದು ಕಡೆ 30 ಬಾಲಕರನ್ನು ಕೊಂದು, ಇನ್ನೊಂದು ಕಡೆ ಅನೇಕ ಪೆಂಗಸರುವ ಕ್ಕಳನ್ನು ಆಹುತಿ ತೆಗೆದುಕೊಂಡಿವೆ.

ಸತ್ತ ಕುದುರೆ ತಿನ್ನುತ್ತಿರುವರು

ಸ್ಪಾಲಿನ್‌ಗ್ರಾಡಿನಲ್ಲಿ ನಾಜಿಗಳ ಸ್ಥಿತಿ ಭಯಂಕರವಾಗಿದೆ. 2 ತಿಂಗಳ ಹಿಂದೆ ಸ್ಪಾಲಿನ್‌ಗ್ರಾಡಿನಲ್ಲಿ ನೋಡಿದಲ್ಲೆಲ್ಲಾ ಉರಿಯೇ ಎದ್ದು ಕಾಣುತ್ತಿದ್ದಿತು. ಈಗ ನಾಜಿಗಳು ರಷ್ಯಾದ ಚಳಿಯನ್ನು ತಡೆಯಲಾರದೇ ಲಟಪಟ ಒದ್ದಾಡ್ಡುತ್ತಿರುವರು. ಹಿಟ್ಲರಿನ 22 ವಿಭಾಗಗಳು ಭಯಂಕರ ಕರವಾದ ಹಾನಿಗೀಡಾಗಿವೆ ನಾಜಿಗಳು ಹೊಟ್ಟೆಗಿಲ್ಲದೇ ಬಟ್ಟೆಗಿಲ್ಲದೇ ಜಳಿಗೆ ಒಳಗಾಗಿ ಸಾಯುತ್ತಿದ್ದಾರು. ಹಸಿವೆಯನ್ನು ತಾಳಲಾರದೆ ಸತ್ತ ತಮ್ಮ ಕುದುರೆಗಳನ್ನು ತಿನ್ನುತ್ತಿರುವರು. ದಿನಾಗಲೂ 1200 ಜನರಂತೆ ಕಡಮೆಯಾಗುತ್ತಿರುವರು. 2 ಲಕ್ಷದಷ್ಟು ಜನರು 60 ದಿನಗಳ ಹಿಂದೆ ಇದ್ದರು. ಈಗ ಅವರ ಸಂಖ್ಯೆ 80 ಸಾರಕ್ಕೆ ಇಳಿದಿದೆ.

ಜರ್ಮನ್ ನೌಕಾ ನಷ್ಟ

ಮೊನ್ನೆ ಜರ್ಮನಿಯವರ ಜಹಾಜ ಸಾಮಗ್ರಿಗಳನ್ನು ಸಾಗಿಸುತ್ತಿದ್ದ 13 ಹಡಗುಗಳು ವಿಶ್ವಪಕ್ಷದವರಿಂದ ಮೆಡಿಟರೇನಿಯನ್ ಸಮುದ್ರದಲ್ಲಿ ಮುಳುಗಿಸಲ್ಪಟ್ಟವು.

ಕ್ಷಾಮ ನಿವಾರಣೆಗಾಗಿ

ಹೋಲಾಪುರದಲ್ಲಿ ಕ್ಷಾಮ ನಿವಾರಣಾ ಕೆಲಸಕ್ಕಾಗಿ ಬೊಂಬಾಯಿ ಸರ್ಕಾರದವರು ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಇದರಿಂದ ಕೆಲವು ಕೆಲಸಗಳನ್ನು ಪ್ರಾರಂಭಮಾಡಿ ಕೂಲೀ ರೂಪವಾಗಿ ಸಹಾಯ ಮಾಡುವರು.

ಧಾಳಿಗಾಗಿ ಊರು ಬಿಟ್ಟವರು

ಕಳೆದ ತಿಂಗಳಲ್ಲಿ ಕಲ್ಕತ್ತಾ ಮೇಲೆ ಜಪಾನರ ದಾಳಿಯಾಯಿತಷ್ಟೆ. ಅದರ ಪರಿಣಾಮವಾಗಿ 62 ಸಾವಿರ ಜನರು ಪಟ್ಟಣವನ್ನು ಬಿಟ್ಟಿರುವರೆಂದು ಸರ್ಕಾರದವರ ಪ್ರಕಟಣೆ ಹೊರಡಿಸಿರುವುದಾಗಿ ತಿಳಿಯಬಂದಿದೆ.

ಮ॥ ಎಂ. ಹರಿಯಪ್ಪನವರನ್ನು ನಮ್ಮ ದಿನಪತ್ರಿಕೆಗೆ ಮೈಸೂರು ಏಜೆಂಟರನ್ನಾಗಿ ನೇಮಿಸಿರುತ್ತೇನೆ. ಮ್ಯಾನೇಜರ್.

Short & Local Advts

ನಿಮ್ಮ ಊರಿನ ಮುಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎಮರುನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ಪಿ-ಚ್ಚರ್ಸ್

ಗಾಂಧಿಸ್ಕೆವರ್, ಮೈಸೂರು ಇವರ ಸಂಗೀತರತ್ನ ವಿದ್ವಾನ್ ಟಿ. ಚೌಡಯ್ಯನವರು, ಕಲ್ಪರ್ತಿ ಕವೆಡಿಯ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)

ಎಂಬ ಕನ್ನಡಸಾಮಾಜಿಕ ಚಿತ್ರ.

ಉತ್ತಮ ಕಾಫೀ

ಸುವಾಸನೆ ! ಅತ್ಯಂತ ರುಚಿ !

ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮೀನಾರಾಯಣ ಕಾಫೀವರ್ಕ್ಸ್ !

ಕೊಳ್ಳೇಗಾಲ

ಅಪೆರ

ಕುನ್ಸಿರ್ ಬಾಪ್

2 ನೇ ಅಮೋಘವಾರ

For Invigorating Coffee & Tea

Sastry's Coffee Rooms

Chamarajapuram, Myaore

Edited, Printed & pnblished by M. S. Krishna Rao, at the Satyavadi Press. Chamaraja Agrahar, Mysore.